**ದಿನಾಂಕಃ 25.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.**

## ಮುಂದುವರಿದ ಪಾಟೀಸವಾಲುಃ 1 ನೇ ಪ್ರತಿವಾದಿಪರ ವಕೀಲರಾದ ಶ್ರೀ ಎಮ್.ಆರ್.ಎಲ್. ಅವರಿಂದ–

1. ನಾನು ಪೊಲೀಸ್ ಇಲಾಖೆಯಲ್ಲಿ ನೌಕರ ಎಂದರೆ ಸರಿ. ಯಾವುದೇ ಖಾಲಿ ಕಾಗದಗಳಿಗೆ ಸಹಿ ಮಾಡುವುದು ತಪ್ಪು ಎಂದು ನನಗೆ ಗೊತ್ತು. ಅದೇ ರೀತಿ ಸುಳ್ಳು ದಾಖಲಾತಿಗಳಿಗೆ ಸಹಿ ಮಾಡುವುದು ಸಹ ತಪ್ಪು ಎಂದು ನನಗೆ ಗೊತ್ತು ಎಂದರೆ ಸರಿ. ನನಗೆ ಯಾವುದೇ ಖಾಲಿ ಕಾಗದಗಳಿಗೆ ಅಥವಾ ಸುಳ್ಳು ದಾಖಲಾತಿಗಳಿಗೆ ಸಹಿ ಮಾಡುವ ಅಭ್ಯಾಸ ಇಲ್ಲ ಎಂದರೆ ಸರಿ. ಯಾವುದೇ ಪತ್ರಕ್ಕೆ ಸಹಿ ಮಾಡುವ ಮೊದಲು ಅದರ ಒಕ್ಕಣೆ ಓದಿ, ಸರಿ ಇದ್ದರೆ ಮಾತ್ರ ಸಹಿ ಮಾಡುತ್ತೇನೆ ಎಂದರೆ ಸರಿ. ದಾಖಲೆಗಳು ಸರಿ ಇಲ್ಲದಿದ್ದಲ್ಲಿ ಅದಕ್ಕೆ ಸಹಿ ಮಾಡದೆ ಪ್ರತಿಭಟಿಸುತ್ತೇನೆ ಎಂದರೆ ಸರಿ.

2. ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ 6 ನೇ ಖಂಡಿಕೆಯಲ್ಲಿ ಸರ್ವೇ ನಂ.246/1 ರಲ್ಲಿ 1 ಎಕರೆ 28 ಗುಂಟೆ ನನ್ನ ಭಾಗಕ್ಕೆ ಹಂಚಿಕೆ ಆಗಿತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಸ್ವತ್ತು ನನ್ನ ಭಾಗಕ್ಕೆ ಬಂದಿತ್ತು ಎಂದು ತೋರಿಸಲು ಇಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

3. ಅದೇ ರೀತಿ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ 7 ನೇ ಖಂಡಿಕೆಯಲ್ಲಿ ಸರ್ವೇ ನಂ.246/1 ರಲ್ಲಿ 3 ಎಕರೆ 16 ಗುಂಟೆ ಪೈಕಿ 1 ಎಕರೆ 28 ಗುಂಟೆ 3 ನೇ ಪ್ರತಿವಾದಿ ತಮ್ಮಯ್ಯ ಅವರಿಗೆ ಹಂಚಿಕೆ ಆಗಿತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಸ್ವತ್ತು 3 ನೇ ಪ್ರತಿವಾದಿಗೆ ಹಂಚಿಕೆ ಆಗಿತ್ತು ಎಂದು ತೋರಿಸಲು ಇಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ.

4. ಅದೇ ರೀತಿ ನನ್ನ ಮುಖ್ಯವಿಚಾರಣೆ ಪ್ರಮಾಣ ಪತ್ರದ 8 ನೇ ಖಂಡಿಕೆಯಲ್ಲಿ ಸರ್ವೇ ನಂ.246/2 ರ 1 ಗುಂಟೆ ಖರಾಬು ಸೇರಿ ಒಟ್ಟು 3 ಎಕರೆ 16 ಗುಂಟೆ ಪೈಕಿ 1 ಎಕರೆ

**26 ½** ಗುಂಟೆ ಜಮೀನು 2 ನೇ ಪ್ರತಿವಾದಿ ಈರಯ್ಯ ಅವರಿಗೆ ಹಂಚಿಕೆ ಆಗಿತ್ತು ಎಂದು ಹೇಳಿದ್ದೇನೆ ಎಂದರೆ ಸರಿ. ಸದರಿ ಸ್ವತ್ತು 2 ನೇ ಪ್ರತಿವಾದಿಗೆ ಹಂಚಿಕೆ ಆಗಿತ್ತು ಎಂದು ತೋರಿಸಲು ಇಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಈ ರೀತಿ ನಮ್ಮ 3 ಜನರಿಗೆ ಮೇಲೆ ಹೇಳಿದಂತ ಪ್ರಮಾಣ ಪತ್ರದಲ್ಲಿ ನಮೂದಿಸಿರುವ ಚೆಕ್ಕುಬಂದಿಯೊಳಗಿನ ಜಮೀನುಗಳು ಹಂಚಿಕೆ ಆಗಿದ್ದವು ಎಂದು ತೋರಿಸಲು ಇಲ್ಲಿ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿಲ್ಲ. ಸಾಕ್ಷಿ ಮುಂದುವರಿದು ಆರ್.ಟಿ.ಸಿ ಯಲ್ಲಿ ಸಮಭಾಗ ಎಂದು ಕಾಣಿಸಲಾಗಿದೆ, ಅದೇ ರೀತಿ ನಾವು ಹಂಚಿಕೆ ಮಾಡಿಕೊಂಡು ಸ್ವಾಧೀನದಲ್ಲಿದ್ದೇವೆ ಎಂದು ನುಡಿಯುತ್ತಾರೆ. ಈ ರೀತಿ ನಾವು ಹಂಚಿಕೆ ಮಾಡಿಕೊಂಡು ಸ್ವಾಧೀನದಲ್ಲಿದ್ದೇವೆ ಎಂದು ತೋರಿಸಲು ಆರ್.ಟಿ.ಸಿ.ಗಳನ್ನು ಹಾಜರುಪಡಿಸುತ್ತೇನೆ.

5. **ನಾನು** ಹಾಜರುಪಡಿಸಿರುವ ನಿಪಿ.1 ರ ಆರ್.ಟಿ.ಸಿ.ಯಲ್ಲಿ 2 ನೇ ಪ್ರತಿವಾದಿ ಈರಯ್ಯ ಅವರಿಗೆ 34 ಗುಂಟೆ ಕಾಣಿಸಲಾಗಿದೆ ಎಂದರೆ ಸರಿ. ಅದೇ ರೀತಿ ಸರ್ವೇ ನಂ.246/1 ರಲ್ಲಿ ನನ್ನ ಹೆಸರಿಗೆ 34 ಗುಂಟೆ ಹಾಗೂ 3 ನೇ ಪ್ರತಿವಾದಿ ತಮ್ಮಯ್ಯ ಅವರಿಗೆ 34 ಗುಂಟೆ ಕಾಣಿಸಲಾಗಿದೆ ಎಂದರೆ ಸರಿ.

6. ನಿಪಿ.1 ರ ಆರ್.ಟಿ.ಸಿ.ಯಲ್ಲಿ ಸರ್ವೇ ನಂ. 246/1 ರ ಆರ್.ಟಿ.ಸಿ. ಒಟ್ಟು 4 ಹಾಳೆಗಳು ಒಳಗೊಂಡಿವೆ ಎಂದರೆ ಸರಿ. ಸದರಿ 4 ಹಾಳೆಗಳ ಪೈಕಿ ನಾನು 3 ಹಾಳೆಗಳನ್ನು ಮಾತ್ರ ಹಾಜರುಪಡಿಸುತ್ತೇನೆ ಎಂದರೆ ಸರಿ. ಈ 4 ನೇ ಹಾಳೆಯನ್ನು ಏಕೆ ಹಾಜರುಪಡಿಸಿಲ್ಲ ಎಂದು ನನಗೆ ಹೇಳಲು ಆಗುವುದಿಲ್ಲ. ಸದರಿ ನಿಪಿ.1 ರಲ್ಲಿರುವ ಆರ್.ಟಿ.ಸಿ. ಒಟ್ಟು 4 ಹಾಳೆಗಳಲ್ಲಿ ಈಗ ನನಗೆ ತೋರಿಸುತ್ತಿರುವ ಹಾಳೆ 4 ನೇ ಪುಟವಾಗಿದೆ ಎಂದರೆ ಸರಿ. ಅದರಲ್ಲಿ ಪುಟ್ಟನಂಜಮ್ಮ ಕೋಂ ಲೇಟ್ ದೊಡ್ಡಯ್ಯ ಅಂದರೆ 1 ನೇ ಪ್ರತಿವಾದಿ ಹೆಸರಿಗೆ 34 ಗುಂಟೆ ಎಂದು ಕಾಣಿಸಲಾಗಿದೆ ಎಂದರೆ ಸರಿ. ಈ ಹಂತದಲ್ಲಿ 1 ನೇ ಪ್ರತಿವಾದಿ ಪರ ವಕೀಲರು ಸಾಕ್ಷಿಗೆ ತೋರಿಸಿದ ಸರ್ವೇ ನಂ.246/1 ರ 4 ಪುಟಗಳುಳ್ಳ **ಆರ್.ಟಿ.ಸಿ.ಯನ್ನು ನಿಡಿ.**1 ಎಂದು ಗುರುತಿಸಲಾಯಿತು. 1 ನೇ ಪ್ರತಿವಾದಿ ಪುಟ್ಟನಂಜಮ್ಮ ಅವರ ಹೆಸರಿಗೆ ಬಂದಿರುವ 34 ಗುಂಟೆ ಸ್ವತ್ತಿನ ವಿಚಾರವನ್ನು ಮರೆಮಾಚುವ ಉದ್ದೇಶದಿಂದ ನಾನು ನಿಪಿ.1 ರ 4 ನೇ ಪುಟವನ್ನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ.

7. ನಿಪಿ.2 ರ ಪ್ರಕಾರ ಸರ್ವೇ ನಂ.246/2 ರ 1 ಗುಂಟೆ ಖರಾಬು ಸೇರಿ ಒಟ್ಟು 3 ಎಕರೆ 14 ಗುಂಟೆ ಪೈಕಿ ನನಗೆ ಹಾಗೂ 2 ನೇ ಮತ್ತು 3 ನೇ ಪ್ರತಿವಾದಿಗಳಿಗೆ ತಲಾ 33 ಗುಂಟೆ, ಹಾಗೂ 1 ನೇ ಪ್ರತಿವಾದಿಗೆ ಪುಟ್ಟನಂಜಮ್ಮ ಅವರಿಗೆ 34 ಗುಂಟೆ ಖಾತೆ ನಮೂದಾಗಿದೆ ಎಂದರೆ ಸರಿ.

8. ಈ ರೀತಿ ನಮ್ಮ ನಮ್ಮ ಹೆಸರಿಗೆ ಮೌಖಿಕವಾಗಿ ವಿಭಾಗವಾಗಿ ಸ್ವಾಧೀನದಲ್ಲಿದ್ದ ಆದರೆ ಖಾತೆ ಜಂಟಿಯಾಗಿದ್ದ ಕಾರಣ ಅದನ್ನು ಅಲಾಯಿದ ಪಡಿಸಿಕೊಳ್ಳುವ ಸಲುವಾಗಿ ಖಾತೆ ಮಾಡಿಕೊಡಿ ಎಂದು 1 ನೇ ಪ್ರತಿವಾದಿಯ ಗಂಡ ದೊಡ್ಡಯ್ಯ ಹಾಗೂ 2,3 ನೇ ಪ್ರತಿವಾದಿ ಹಾಗೂ ನಾನು ತಾಲೂಕು ಕಚೇರಿಗೆ ಅರ್ಜಿ ನೀಡಿದ್ದೇವು ಎಂದರೆ ಸರಿ. ಈಗ ನನಗೆ ತೋರಿಸುತ್ತಿರುವ ದಾಖಲೆ ಸದರಿ ನಾವು ಕೊಟ್ಟಿದ್ದಂತಹ ಜಂಟಿ ಅರ್ಜಿ ಆಗಿದೆ ಎಂದರೆ ಸರಿ. ಸದರಿ ನಮ್ಮ ಅರ್ಜಿಯ ರೀತ್ಯಾ ಕಾನೂನು ಪ್ರಕಾರ ಕ್ರಮ ಕೈಗೊಂಡು ನಮ್ಮ ನಮ್ಮ ಹೆಸರಿಗೆ ಪ್ರತ್ಯೇಕ ಖಾತೆ ನಮೂದು ಮಾಡಲಾಗಿದೆ ಎಂದರೆ ಸರಿ ಎಂದು ನುಡಿದು ಪುನಃ ಅದು ಸರಿಯಾಗಿಲ್ಲ ಎಂದು ನಾವು ಈ ನ್ಯಾಯಾಲಯಕ್ಕೆ ಬಂದಿದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ಸಾಕ್ಷಿಗೆ 1 ನೇ ಪ್ರತಿವಾದಿಯ ಪರ ವಕೀಲರು ತೋರಿಸಿದ **ಅರ್ಜಿ ಹಾಗೂ ಅದರ ಲಗತ್ತು ವರದಿಯನ್ನು ನಿಡಿ.2** ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟೀಸವಾಲು:** ಕಾಲಾವಕಾಶ ಕೋರಿದ್ದು, ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

ಜೈಬುನ್ನಿಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.